# ನಾಳೆ ಎನ್ಐಟಿಕೆಯಲ್ಲಿ ಯುವ ದಿನಾಚರಣೆ

**ಮಂಗಳೂರು:** ಲಯನ್ಸ್ ಜಿಲ್ಲೆ 317 ವತಿಯಿಂದ ಜ.12ರಂದು ಸುರತ್ಕಲ್ ಎನ್ಐಟಿಕೆ ಸಭಾಂಗಣದಲ್ಲಿ ಯುವ ಉತ್ಸವ ಹಾಗೂ ಸಬಲೀಕರಣ ಕಾರ್ಯಕ್ರಮ ಆಯೋಜಿಸಲಾಗಿದೆ. ಲಯನ್ಸ್ ಜಿಲ್ಲಾ ಗವರ್ನರ್ ಸಂಜಿತ್ ಶೆಟ್ಟಿ ಉದ್ಘಾಟಿಸುವರು. ಈ ಸಂದರ್ಭದಲ್ಲಿ ನಡೆಯುವ ಸಮೂಹ ಚರ್ಚೆಯಲ್ಲಿ ಶಾಸಕ ಡಾ.ವೈ.ಭರತ್ ಶೆಟ್ಟಿ, ಮಡಿಕೇರಿ ಜಿಲ್ಲಾ ಪಂಚಾಯಿತಿ ಸಿಇಒ ಡಾ.ಆಕಾಶ್ ಎಸ್. ಮತ್ತು ಎನ್ಐಟಿಕೆಯ ಪ್ರಾಧ್ಯಾಪಕ ಡಾ.ಶೀನ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮಾರಂಭದಲ್ಲಿ ಮೂವರು ಯೋಧರು ಮತ್ತು ಯುವ ಸಾಧಕರಿಗೆ ಸನ್ಮಾನ ನಡೆಯಲಿದೆ. ಮಕ್ಕಳಿಂದ ವಿವಿಧ ಕಾರ್ಯಕ್ರಮ ನಡೆಯಲಿದೆ. ಲಯನ್ಸ್ ಜಿಲ್ಲೆ ಸಂಪುಟ ಸದಸ್ಯರು ಸುಮಾರು 400 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಯುವ ಸಬಲೀಕರಣ ಮುಖ್ಯ ಸಂಯೋಜಕಿ ಲಯನ್ ವಾಣಿ ವಿ. ಆಳ್ವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Vijayavani, Date: 11/01/23, p. no- 05